<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲುಃ- ಶ್ರೀ. ಕೆ.ಎಸ್.ಎಂ. ವಕೀಲರಿಂದ ಆರೋಪಿಯ ಪರವಾಗಿ</u>

8. ಸುಮಾರು 5-6 ವರ್ಷಗಳಿಂದ ಆರೋಪಿ ನನಗೆ ಪರಿಚಯ. ನಾವು ಶಬರಿಮಲೆಗೆ ಒಟ್ಟಿಗೆ ಹೋಗುತ್ತಿದ್ದೇವು ಹಾಗಾಗಿ ಪರಿಚಯ. ದಿನಾಂಕಃ 28.03.2023 ರಂದು ಆರೋಪಿಯು ರೂ. 2,00,000/- ಹಣ ಬೇಕು ಎಂದು ನನ್ನ ಬಳಿ ಕೇಳಿರುತ್ತಾರೆ. ಬೆಳ್ತಂಗಡಿಯ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ಆ ರೀತಿ ಸಾಲ ಕೇಳಿರುತ್ತಾರೆ. ಟಿಪ್ಪರ್ ಲಾರಿಯನ್ನು ಖರೀದಿಸಲು ಆರೋಪಿ ಸಾಲ ಪಡೆದಿರುತ್ತಾರೆ. ನಾನು ಸದರಿ ಹಣವನ್ನು ಚೆಕ್ಕ ಮೂಲಕ ಪಾವತಿ ಮಾಡಿರುತ್ತೇನೆ. ನೋಟಿಸು ನೀಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ನೋಟಿಸಿನಲ್ಲಿ ಯಾವ ಕಾರಣಕ್ಕೆ ಸಾಲ ನೀಡಲಾಗಿದೆ ಎಂದು ಉಲ್ಲೇಖ ಮಾಡಲಾಗಿದೆ. ನಾನು ಹಾಜರು ಪಡಿಸಿರುವ ದಾಖಲಾತಿಗಳಲ್ಲಿ ಸದರಿ ನೋಟಿಸು ಕಂಡುಬರುವುದಿಲ್ಲ.

9. ವಕೀಲರಿಗೆ ಮಾಹಿತಿ ನೀಡುವಾಗ ಆರೋಪಿಯ ಲಾಲ್ಕೈ ವಿಳಾಸವನ್ನು ನೀಡಲಾಗಿದೆ. ನಾನು ನೀಡಿದ ನೋಟಿಸು ಆರೋಪಿಗೆ ಜಾರಿಯಾಗಿರುತ್ತದೆ. ಸಾಲ ನೀಡುವಾಗ ಯಾವುದೇ ಕರಾರನ್ನು ಮಾಡಿಕೊಂಡಿರುವುದಿಲ್ಲ. ಹಣವನ್ನು ಕೇಳಿದ ದಿನವೇ ನಾನು ಚೆಕ್ಕು ನೀಡಿರುತ್ತೇನೆ.

10. ನಾನು ಬೆಳ್ತಂಗಡಿಯಲ್ಲಿ ಅಂಗಡಿ ಹೊಂದಿರುತ್ತೇನೆ. ನನ್ನ ವಾರ್ಷಿಕ ಆಧಾಯ ರೂ. 1,00,000/- ದಿಂದ ರೂ. 1,50,000/-. ಅಂಗಡಿಗೆ ತಿಂಗಳಿಗೆ ರೂ. 8000/- ಬಾಡಿಗೆ ಕಟ್ಟುತ್ತೇನೆ. ವಾರ್ಷಿಕವಾಗಿ ಸದರಿ ಅಂಗಡಿಗೆ ರೂ. 2,00,000/- ಬಂಡವಾಳ ಹಾಕಬೇಕು. ಆರೋಪಿ ನೀಡಿದ ಚೆಕ್ಕನಲ್ಲಿ ಹಣ ಇಲ್ಲ ಎಂದು ಹಿಂಬರಹಃ ಬಂದಿರುತ್ತದೆ. ನನ್ನ ಅಂಗಡಿಯಲ್ಲಿ ಕೆಲಸಕ್ಕೆ ಬೇರೆ ಜನ ಇರುವುದಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ